ಗೋವಿಂದ ಪೈ ಅವರ ಖಂಡಕಾವ್ಯಗಳು: ಮಹಾತ್ಮರ ಕಡೆಯ ದಿನ

ನಮಿತಾ ಎ.[1] & ಧನಂಜಯ[2]

[1]ಸಂಶೋಧನಾರ್ಥಿ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

[2]ಸಹಾಯಕ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

DOI: https://doi.org/10.5281/zenodo.18471067

ABSTRACT:

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಖಂಡಕಾವ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಪಾಶ್ಚಿಮಾತ್ಯರಿಂದ ಪರಿಚಯವಾದ ಈ ಸಾಹಿತ್ಯ ಪ್ರಕಾರವನ್ನು ಕನ್ನಡಕ್ಕೆ ರಾಷ್ಟ್ರಕವಿ ಗೋವಿಂದ ಪೈಯವರು ಪರಿಚಯಿಸಿದರು. ಮಹಾಕಾವ್ಯಕ್ಕಿಂತ ತುಸು ಭಿನ್ನವಾದ ಆಯಾಮದಲ್ಲಿ ಕಂಡುಬರುವ ಈ ಪ್ರಕಾರವು ಅನಂತರ ಬಂದ ಕವಿಗಳಿಂದ ವಿಸ್ತಾರವಾಗಿ ಬೆಳೆಯಿತು. ಮನುಷ್ಯ ಬದುಕಿನ ಅರ್ಥವಂತಿಕೆ, ಸಹಜತೆ, ಸಾಮಾಜಿಕ ಬದ್ಧತೆಗಳ ಜೊತೆಗೆ ಹಿಂದಿನ ವೈದಿಕ ಪರಂಪರೆಯ ಮಹಾಕಾವ್ಯಗಳಿಗಿಂತ ಭಿನ್ನವಾಗಿ ಗೋವಿಂದ ಪೈಯವರು ಖಂಡಕಾವ್ಯಗಳನ್ನು ರಚಿಸಿದ್ದಾರೆ. ಬುದ್ಧ, ಯೇಸು, ಕೃಷ್ಣ ಹಾಗೂ ಗಾಂಧೀಜಿಯವರಂತಹ ಮಹಾನ್ ದಾರ್ಶನಿಕರ ಅಂತ್ಯದ ದಿನಗಳನ್ನು ಅರ್ಥಪೂರ್ಣವಾಗಿ, ತಲಸ್ಪರ್ಶಿಯಾಗಿ ಚಿತ್ರಿಸುವ ಈ ಖಂಡಕಾವ್ಯಗಳು ಮನುಷ್ಯ ಬದುಕಿನ ಸಹಜತೆಯನ್ನು ಅನಾವರಣಗೊಳಿಸುತ್ತವೆ. ಪ್ರಸ್ತುತ ಜಾತಿ, ಮತ, ಕುಲ, ಧರ್ಮ, ವರ್ಣಗಳಿಂದ ಸಂಚಯಶಕ್ತಿಗಳು ಇಡೀ ವ್ಯವಸ್ಥೆಯನ್ನು ಬಾಧಿಸುತ್ತಿರುವ ಕಾಲಘಟ್ಟದಲ್ಲಿ ಮನುಷ್ಯನ ನ್ಯಾಯ ಸಮ್ಮತವಾದ ಬದುಕಿಗಾಗಿ ಸ್ಪಂದಿಸುವ ನಿಟ್ಟಿನಲ್ಲಿ ನಾವು ಇವರ ಸಾಹಿತ್ಯವನ್ನು ಅರ್ಥೈಸಬಹುದು.

KEYWORDS:

ಖಂಡಕಾವ್ಯ, ಗೋವಿಂದ ಪೈ, ಗೊಲ್ಗೊಥಾ, ವೈಶಾಖಿ, ಪ್ರಭಾಸ, ದೆಹಲಿ.

ಪೀಠಿಕೆ:

ಕನ್ನಡ ಸಾಹಿತ್ಯದಲ್ಲಿ ಕಾವ್ಯ ಪ್ರಕಾರಗಳಾದ ಕವನ, ಭಾವಗೀತೆ, ಕಥನ ಕವನ, ಮಹಾಕಾವ್ಯ ಎನ್ನುವ ಪ್ರಕಾರಕ್ಕಿಂತ ಭಿನ್ನವಾಗಿ ಖಂಡಕಾವ್ಯದಂತಹ ಒಂದು ಪ್ರಕಾರವನ್ನು ಮೊತ್ತಮೊದಲು ಕನ್ನಡಕ್ಕೆ ಪರಿಚಯಿಸಿದವರು ರಾಷ್ಟ್ರಕವಿ ಗೋವಿಂದ ಪೈ ಅವರು. ಖಂಡಕಾವ್ಯ ಎನ್ನುವುದು ಇಂಗ್ಲಿಷ್‌ನ 'ಎಪಿಕ್ ಫ್ರಾಗ್ಮೆಂಟ್' (Epic Fragment) ಗೆ ಸಂವಾದಿಯಾಗಿ ಬಂದಿರುವಂತಹದ್ದು. ಇತರ ಕಾವ್ಯ ಪ್ರಕಾರಗಳಿಗಿಂತ ಖಂಡಕಾವ್ಯವು ಭಿನ್ನವಾಗಿದೆ. ಈ ಕಾವ್ಯ ಪ್ರಕಾರವು ವಸ್ತು ಮಧ್ಯದಿಂದ ಆರಂಭವಾಗುತ್ತದೆ ಮತ್ತು ಅದರ ಅಂತ್ಯವು ಅನಿರ್ದಿಷ್ಟವಾಗಿರುತ್ತದೆ. "ಮಹಾಕಾವ್ಯಕ್ಕಿಂತ ಗಾತ್ರದಲ್ಲಿ ಖಂಡಕಾವ್ಯವು ಚಿಕ್ಕದಾಗಿದ್ದು ಇದನ್ನು ನೀಳ್ಗವನ, ನೀಳ್ಗವಿತೆ ಎಂತಲೂ ಕರೆದಿದ್ದಾರೆ." ನಾಯಕನ ಬದುಕಿನ ನಿರ್ದಿಷ್ಟ ಸಂದರ್ಭವೊಂದರಿಂದ ಪ್ರಾರಂಭವಾಗುವ ಖಂಡಕಾವ್ಯವು ನಾಯಕನ ಅಂತ್ಯದೊಂದಿಗೆ ಅಥವಾ ಕೆಲವೊಮ್ಮೆ ಆ ರೀತಿಯಲ್ಲಿ ಅಂತ್ಯವಾಗದೆಯೂ ಇರಬಹುದು.

ನವೋದಯ ಕಾಲಘಟ್ಟದಲ್ಲಿ ಗೋವಿಂದ ಪೈ, ಕುವೆಂಪು, ಮುಳಿಯ ತಿಮ್ಮಪ್ಪಯ್ಯ, ಕಡೆಂಗೋಡ್ಲು ಶಂಕರ ಭಟ್ಟ, ಸೇಡಿಯಾಪು ಕೃಷ್ಣಭಟ್ಟ, ಮೊದಲಾದ ಕವಿಗಳು ಸೊಗಸಾದ ಖಂಡಕಾವ್ಯಗಳನ್ನು ಬರೆದಿದ್ದಾರೆ. ಆ ಕಾಲಘಟ್ಟದ ಧೋರಣೆಗಳನ್ನು, ಕಾವ್ಯಪಂಥದ ವೈಶಿಷ್ಟ್ಯಗಳನ್ನು ಈ ಸಂದರ್ಭದಲ್ಲಿ ರಚನೆಯಾದಂತಹ ಖಂಡಕಾವ್ಯಗಳಲ್ಲಿ ಗುರುತಿಸಬಹುದು. ಪುರಾಣವನ್ನು ಹೊಸರೀತಿಯಲ್ಲಿ ವ್ಯಾಖ್ಯಾನಿಸಿ ಕಟ್ಟುವ ಬಗೆ, ರಾಷ್ಟ್ರೀಯತೆ, ದೇಶೀಯತೆ, ನಾಡು-ನುಡಿಯ ಮೇಲಿನ ಪ್ರೀತಿ, ಮಾನವೀಯ ಮೌಲ್ಯಗಳ ಪ್ರತಿಪಾದನೆ ಮುಂತಾದ ಲಕ್ಷಣಗಳನ್ನು ಖಂಡಕಾವ್ಯಗಳಲ್ಲಿ ಕಾಣಬಹುದಾಗಿದೆ. ರಾಷ್ಟ್ರಕವಿ ಗೋವಿಂದ ಪೈ ಅವರ 'ಗೊಲ್ಗೊಥಾ' ಮತ್ತು 'ವೈಶಾಖಿ' ಖಂಡಕಾವ್ಯಗಳು ಕನ್ನಡದ ಮಟ್ಟಿಗೆ ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ, ಖಂಡಕಾವ್ಯವಾಗಿ ವಿಶೇಷವಾದವುಗಳು.

ಮಂಜೇಶ್ವರ ಗೋವಿಂದ ಪೈ ಅವರು ಗೊಲ್ಗೊಥಾ, ವೈಶಾಖಿ, ಪ್ರಭಾಸ ಮತ್ತು ದೆಹಲಿ ಈ ನಾಲ್ಕು ಖಂಡಕಾವ್ಯಗಳಿಗೆ ಆರಿಸಿಕೊಂಡಿರುವ ವಸ್ತು ಮಹಾಪುರುಷರ ಕೊನೆಯ ದಿನಗಳನ್ನು. ಮರಣ ಒಂದು ಶಾಶ್ವತ ಸತ್ಯ ಹೇಗೋ ಹಾಗೆಯೇ ಶಾಶ್ವತ ಸಂಗಾತಿಯೂ ಕೂಡ ಎಂದುಕೊಂಡವರು ಅವರು. ಮರಣ ಸಂಭವದ ತೀವ್ರತೆಯಲ್ಲಿ ಬದುಕಿನ ಹಿಂದು-ಮುಂದನ್ನು ಕ್ರೋಢೀಕರಿಸಿ ಕಾವ್ಯಾನುಭವದ ಔನ್ನತ್ಯ ಸ್ಥಿತಿಗೆ ಓದುಗರನ್ನು ಕೊಂಡೊಯ್ಯುವುದು ಪೈ ಅವರ ವಿಧಾನವಾಗಿದೆ. ಎಲ್ಲಾ ಅಂತ್ಯದಲ್ಲೂ ಇನ್ನೊಂದು ಆರಂಭವಿದೆ ಎಂಬುವುದನ್ನು ಅವರ ಖಂಡಕಾವ್ಯಗಳು ಸಾರುತ್ತವೆ. ಸಾವಿನ ಕುರಿತಾಗಿಯೇ ಯೇಸು, ಬುದ್ಧ, ಕೃಷ್ಣ, ಗಾಂಧೀಜಿಯವರ ಕಡೆಯ ದಿನದ ಚಿತ್ರಣವಿರುವ ಈ ಕಾವ್ಯಗಳು ಆಧುನಿಕ ಕಾವ್ಯಪರಂಪರೆಯಲ್ಲಿಯೇ ಒಂದು ಪ್ರತ್ಯೇಕ ಪ್ರಕಾರವಾದ ಖಂಡಕಾವ್ಯವನ್ನು ಸಂಪನ್ನಗೊಳಿಸಿದ ಕೃತಿಗಳಾಗಿವೆ.

1931ರಷ್ಟು ಹಿಂದೆ ಗೊಲ್ಗೊಥಾ ಎಂಬ ಒಂದು ಖಂಡಕಾವ್ಯವನ್ನು ರಚಿಸಿದರು.

ಕನ್ನಡ ಸಾಹಿತ್ಯದಲ್ಲಿ ಹಿಂದೂ ಜೈನ ಪುರಾಣ ಕಥೆಗಳೇ ಕನ್ನಡದ ಕವಿಗಳಿಗೆ ಕಾವ್ಯ ವಸ್ತುಗಳಾಗಿದ್ದು ಹೊಸತನ ಇಲ್ಲದೇ ನರಳುತ್ತಿದ್ದ ಆ ಕಾಲದಲ್ಲಿ ಗೋವಿಂದ ಪೈಯವರ ಗೊಲ್ಗೊಥಾ ಕಾವ್ಯಪ್ರಿಯರಿಗೆ ಹೊಸತೊಂದು ದಾರಿಯನ್ನೇ ತೋರಿಸಿತು. ಇಂಗ್ಲೀಷ್ ಸಾಹಿತ್ಯವನ್ನು ಅಭ್ಯಾಸ ಮಾಡಿದವರು ಕೆಲವರು ಛಂದಸ್ಸುಗಳಲ್ಲಿ ಹೊಸತನವನ್ನು ತಂದು ಹೊಸ ಕಾವ್ಯಗಳನ್ನು ಬರೆದರೂ, ಪ್ರಪಂಚದಲ್ಲಿಯೇ ಒಂದು ಪ್ರಖ್ಯಾತ ಪುರಾಣವೆನಿಸಿದ ಬೈಬಲ್ ಕಥೆಯ ಆಧಾರದಿಂದ ಕನ್ನಡದ ಸಾಹಿತ್ಯ ಸತ್ವವನ್ನು ಹೆಚ್ಚಿಸಲು ಪ್ರಯತ್ನಿಸಿದವರು ವಿರಳ. ಇಂತಹ ಒಂದು ದೋಷವನ್ನು ಹೋಗಲಾಡಿಸಲು ಕ್ರಿಸ್ತಪುರಾಣವನ್ನು ಎತ್ತಿಕೊಂಡು ಒಂದು ವಿಶಿಷ್ಟವಾದ ಖಂಡಕಾವ್ಯವನ್ನು ಬರೆದವರಲ್ಲಿ ಮೊದಲಿಗರು ಮತ್ತು ಅದ್ವಿತೀಯರೂ ಆದವರು ಗೋವಿಂದ ಪೈಯವರು.

ಕನ್ನಡ ಸಾಹಿತ್ಯದಲ್ಲಿ ಶೃಂಗಾರ ರಸವನ್ನೇ ಬಳಸಿ ಕಾವ್ಯ ರಚಿಸುತ್ತಿದ್ದ ಆ ಸಂದರ್ಭದಲ್ಲಿ ಅದನ್ನು ಮೀರಿ ಕರುಣಾ ರಸವನ್ನು ಬಳಸಿ ಪೈಯವರು ಕಾವ್ಯವನ್ನು ರಚಿಸಿದ್ದಾರೆ. ಅವರ ಕಾವ್ಯದ ವಸ್ತುವಿಗೆ ಒಂದು ಪ್ರಧಾನ ಪ್ರೇರಣೆ 'ಸಾವು'. ಹೀಗೆ ಸಾವನ್ನು ಕೇಂದ್ರವಾಗಿಟ್ಟುಕೊಂಡು ಕಾವ್ಯಗಳನ್ನು ಬರೆದಿದ್ದಾರೆ. ಸಾವು ಎನ್ನುವುದು ಇಂಥವರಿಗೆ ಮಾತ್ರ ಸೀಮಿತ ಎಂಬುವುದಿಲ್ಲ. ಭೂಮಿಯ ಮೇಲಿನ ಪ್ರತಿಯೊಂದು ಚರಾಚರ ಜೀವಿಗೂ ಸಾವು ಒಂದಲ್ಲಾ ಒಂದು ದಿನ ಬಂದೇ ಬರುತ್ತದೆ. ಸಾವು ಎಂಬುವುದು ಜಾತಿ, ಧರ್ಮ ಎಲ್ಲವನ್ನು ಮೀರಿದುದು. ಎಂತಹ ಮಹಾತ್ಮನೂ ಒಂದಲ್ಲಾ ಒಂದು ದಿನ ಸಾವಿಗೆ ಶರಣಾಗಲೇಬೇಕು. ಯೇಸುವಿನ ಕಡೆಯ ದಿನವನ್ನು ಚಿತ್ರಿಸುವ 'ಗೊಲ್ಗೊಥಾ', ಬುದ್ಧನ ಕಡೆಯ ದಿನವನ್ನು ಚಿತ್ರಿಸುವ 'ವೈಶಾಖಿ' ಈ ಎರಡು ಖಂಡಕಾವ್ಯಗಳು ಕನ್ನಡಕ್ಕೆ ಬಹು ವಿಶಿಷ್ಟವಾದವುಗಳಾಗಿವೆ. ಈ ಎರಡು ಖಂಡಕಾವ್ಯಗಳ ವಸ್ತು ಕನ್ನಡಕ್ಕೆ ತೀರಾ ಹೊಸತಾಗಿದೆ. ಅವುಗಳ ಹಿರಿಮೆಯನ್ನು ಹೇಳಲು ಹೊರಟಿರುವ ಕವಿಯು ಯಾವ ಮತ ಪ್ರಚಾರಕ್ಕೂ ಕಟ್ಟು ಬೀಳದೆ, ಮಹಾತ್ಮರ ಸಾವು ಎಷ್ಟು ಅರ್ಥಪೂರ್ಣವಾದುದು ಎಂಬುವುದನ್ನು ಸಮರ್ಥಿಸುವುದೇ ಮುಖ್ಯ ಗುರಿಯಾಗಿಟ್ಟುಕೊಂಡು ಈ ಕಾವ್ಯಗಳನ್ನು ರಚಿಸಿದ್ದಾರೆ. ಗೋವಿಂದ ಪೈ ಅವರು ತಮ್ಮ 'ಗೊಲ್ಗೊಥಾ ಮತ್ತು ವೈಶಾಖಿ' ಎಂಬ ಕೃತಿಯ ಪ್ರಸ್ತಾವನೆಯಲ್ಲಿ "ಮಹಾತ್ಮರ ಜನನ, ಜೀವನಗಳು ಎಷ್ಟು ಮಹತ್ವಪೂರ್ಣವೋ ಅವರ ಮರಣವು ಅಷ್ಟೇ ವಿಶಿಷ್ಟವಾದುದು. ಯಾವುದೋ ಒಂದು ಧ್ಯೇಯಕ್ಕಾಗಿ ಬದುಕಿ ಬಾಳಿದ ಹುತಾತ್ಮರು ಸಾವಿಗೆ ಅಂಜುವುದಿಲ್ಲ. ಅದು ಯಾವ ರೂಪದಲ್ಲಿಯೇ ಬರಲಿ ಅದನ್ನು ನಗುನಗುತ್ತಾ ಸ್ವಾಗತಿಸುವರು. ಮೃತ್ಯುವಿನ ಶೀತಲಸ್ಪರ್ಶದಿಂದ ಅಂಥವರ ಬದುಕು ಅಮರವಾಗುವುದೇ ವಿನಃ ಎಂದೆಂದಿಗೂ ಕೊನೆಗಾಣುವುದಿಲ್ಲ. ಇಂಥ ಅಪೂರ್ವವಾದ ಸಾವಿನ ಮಹತ್ವವನ್ನು ಕವಿ ಹೃದಯ ಬಹು ಚೆನ್ನಾಗಿ ಗ್ರಹಿಸಬಲ್ಲುದು." (ಗೊಲ್ಗೊಥಾ ಮತ್ತು ವೈಶಾಖಿ–1963) ಎಂದು ಉಲ್ಲೇಖಿಸಿದ್ದಾರೆ.

ಸಾಮಾನ್ಯವಾಗಿ ಕವಿಗಳು ತನ್ನ ಅನುಭವದ ರಸನಿಮಿಷಗಳನ್ನು ತನ್ನ ಕಾವ್ಯ ವಿಷಯಗಳನ್ನಾಗಿ ಆರಿಸಿಕೊಂಡಿದ್ದಾರೆ. ಹೊಸಗನ್ನಡ ಕಾವ್ಯದಲ್ಲಿಯಂತೂ ಅನುಭವವೇ ಹೆಚ್ಚಿನ ಮಹತ್ವ ಪಡೆದಿತ್ತು. ತನ್ನ ಪರಿಸರದ ಅದರಿಂದ ರೂಪಿತಗೊಳ್ಳುವ

ತನ್ನ ವ್ಯಕ್ತಿತ್ವ, ಇವು ನೀಡಿದ ಜೀವನಾನುಭವ, ಸೌಂದರ್ಯಾನುಭವ ಇವುಗಳನ್ನು ಮೀರಿ ಹೊಸ ಕವಿ ಕಲ್ಪನೆಯ ಬಿಸಿಲುಗುದುರೆಯನ್ನು ಬೆನ್ನುಹತ್ತಿ ಹೋಗುವುದಿಲ್ಲ. ತಾನು ಕಾಣದ್ದನ್ನು ಕವಿ ತನ್ನ ಕಾವ್ಯದಲ್ಲಿ ವ್ಯಕ್ತಗೊಳ್ಳಲು ಬಯಸುವುದಿಲ್ಲ. ಆದರೆ ಇದಕ್ಕೆ ವಿರುದ್ಧವಾಗಿ ಕಾವ್ಯ ಪ್ರಿಯರನ್ನು ಬೆರಗುಗೊಳಿಸುವಂತೆ ತನ್ನ ದೇಶವಲ್ಲದ, ತನ್ನ ಕಾಲವಲ್ಲದ ಎರಡು ಸಾವಿರ ವರ್ಷಗಳ ಹಿಂದೆ ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದ ಆ ದಿನದ ದೃಶ್ಯಗಳನ್ನೆಲ್ಲ ಕವಿಯ ಕಲ್ಪನೆಗೆ ತೆಗೆದುಕೊಂಡು ಒಂದು ಹೊಸ ಕಾವ್ಯವನ್ನು ರಚಿಸಿದ್ದಾರೆ. ಅದುವೇ 'ಗೊಲ್ಗೊಥಾ' ಎಂಬ ಖಂಡಕಾವ್ಯ. ಹೀಗೆ ಪೈ ಅವರು ಈ ಕಾವ್ಯವನ್ನು ರಚಿಸುವ ಮೂಲಕ, ಕನ್ನಡ ಕಾವ್ಯದಲ್ಲಿಯೇ ಮೊದಲಾಗಿ ದೇಶ-ಕಾಲಾತೀತವಾದ, ಕಾಲ್ಪನಿಕ ವಸ್ತುಸ್ಥಿತಿಯನ್ನು ತಿಳಿಯಪಡಿಸಿದ್ದಾರೆ.

ಗೊಲ್ಗೊಥಾ ಕಾವ್ಯವು ಸರಳರಗಳೆಯಲ್ಲಿ ಇರುವ ಖಂಡಕಾವ್ಯ. ಈ ಕಾವ್ಯ ಕನ್ನಡ ಕಾವ್ಯಕ್ಕೆ ಹಿರಿದಾದ ಕಾಣಿಕೆ, ಅಪರೂಪದ ಕಾಣಿಕೆ. ಕನ್ನಡಿಗರಿಗೆ ಮಾತ್ರವಲ್ಲ ಎಲ್ಲಾ ಕಾವ್ಯಪ್ರಿಯರಿಗೂ ಯಾವ ಕಾಲದಲ್ಲಯೂ ಓದಿ ಮೆಚ್ಚಬೇಕಾದ ಕಾವ್ಯವಾಗಿದೆ. ಗಾತ್ರದಲ್ಲಿ ಇದು ಅಷ್ಟೇನೂ ಹಿರಿದಾಗಿಲ್ಲದಿದ್ದರೂ, ಕಾವ್ಯಗುಣದಲ್ಲಿ ಮಾತ್ರ ಇದು ನಿಜವಾಗಿಯೂ ಹಿರಿದು. ಗೊಲ್ಗೊಥಾ ಕೃತಿಯು ಬರೀಯ ಚಿತ್ರಣಗಳಾಗುವುದಿಲ್ಲ, ಕಲ್ಪನೆಗಳಾಗುವುದಿಲ್ಲ ಬದಲಿಗೆ ಯೇಸುವಿನ ಬಗ್ಗೆ ನಮ್ಮ ಗೌರವವನ್ನು ಹೆಚ್ಚಿಸುವ ಹಾಗೂ ಅವನನ್ನು ಹಿಂಸಿಸುವವರ ಬಗ್ಗೆ ನಮ್ಮಲ್ಲಿ ಕನಿಕರವನ್ನು ಮೂಡಿಸುವ ಪ್ರತಿಮೆಗಳಾಗುತ್ತವೆ. ಇದುವೇ ಈ ಕಾವ್ಯದ ಹಿರಿಮೆ. ವ್ಯುತ್ಪತ್ತಿ, ಇತಿಹಾಸ ಜ್ಞಾನ ಮತ್ತು ಪ್ರತಿಭೆ ಇವುಗಳ ಸಂಗಮದಿಂದ ಸಾಹಿತ್ಯ ಕ್ಷೇತ್ರದಲ್ಲಿ ಮೇರು ಕೃತಿಯಾಗಿ ಗೊಲ್ಗೊಥಾ ಕೊನೆಯವರೆಗೂ ನಿದರ್ಶನವಾಗಿ ನಿಲ್ಲುವ ಕಾವ್ಯವಾಗಿವೆಯೆಂದು ಹೆಮ್ಮೆಯಿಂದ ಹೇಳಬಹುದು.

ಯೇಸುಕ್ರಿಸ್ತನ ಕಡೆಯ ದಿನವನ್ನು ಕಂಡ ಕವಿಯ ದರ್ಶನಕ್ಕೆ ಭರತಖಂಡದಲ್ಲಿ ಬದುಕಿ ಬಾಳಿದ ಸಮಸ್ತ ಜಗತ್ತಿಗೇ ಅಹಿಂಸೆಯ ತತ್ವವನ್ನು ಸಾರಿದ ಭಗವಾನ್ ಬುದ್ಧದೇವನ ಮಹಾನಿರ್ವಾಣದತ್ತ ಸ್ವಾಭಾವಿಕವಾಗಿಯೇ ಮನಸ್ಸು ಸೆಳೆಯುತ್ತದೆ. ಗೊಲ್ಗೊಥಾದಲ್ಲಿ ಯೇಸುವಿನ ದುರಂತ ಮರಣವನ್ನು ಕಂಡ ಕವಿಗೆ ಪ್ರಶಾಂತವಾಗಿ ಜೀವವನ್ನು ಭಗವಂತನಿಗೆ ಸಮರ್ಪಿಸಿದ ಮಹಾತ್ಮನ ಮರಣವೂ ಅಷ್ಟೇ ಹಿರಿದಾಗಿ ಕಾಣಿಸುತ್ತದೆ. ಗೊಲ್ಗೊಥಾದ ರೌದ್ರತೆಗೂ ವೈಶಾಖಿಯ ಸೌಮ್ಯತೆಗೂ ಅಜಗಜಾಂತರವಿದೆ. ಈ ಕಾವ್ಯದಲ್ಲಿ ತಥಾಗತನ ಭವ್ಯ ವ್ಯಕ್ತಿತ್ವವನ್ನು ಹಿಡಿದೆತ್ತಿ ತೋರಿಸಿದ್ದಾರೆ. ಬೌದ್ಧ ಧರ್ಮದ ಸಾರವನ್ನೆಲ್ಲ ತಿಳಿದಿದ್ದ ಅವರು ಈ ಖಂಡಕಾವ್ಯದಲ್ಲಿ ಅದರ ಪ್ರಭಾವವನ್ನು ಐಕ್ಯಗೊಳಿಸಿದ್ದಾರೆ. ಮಹಾತ್ಮನಾದವನು ಯಾವುದೇ ಸಾಮಾನ್ಯವಾದ ಜಾತಿ ನೀತಿಯ ಕಟ್ಟುಪಾಡುಗಳ ಬಂಧನಕ್ಕೆ ಒಳಗಾಗದೆ ಮಾನವ ಕುಲದ ಏಳಿಗೆಯ ದೃಷ್ಟಿಕೋನವನ್ನು ಹೊಂದಿದವನಾಗಿ ಸತ್ಯದ ದಾರಿಯಲ್ಲಿಯೇ ಮುನ್ನಡೆಯುವವನಾಗಿರುತ್ತಾನೆ. ಜನ ಸಾಮಾನ್ಯನಿಗೆ ಬರುವ ಕಷ್ಟಗಳು ಅವರಿಗೆ ಕಷ್ಟವಾಗಿ ಕಾಣುವುದಿಲ್ಲ. ಇಂತಹ ಅವತಾರ ಪುರುಷರ ದಿವ್ಯ ಚರಿತ್ರೆಯನ್ನು ಆ ಮಹಾತ್ಮರಿಗೆ ಇಂಥಾ ಸ್ಥಿತಿ ಬಂತಲ್ಲ ಎಂದು ಮನಕರಗುವಂತೆ ತೆರೆದಿಟ್ಟ ಕವಿ

ಗೋವಿಂದ ಪೈಯವರ ಹೃದಯ ವೈಶಾಲ್ಯತೆಯನ್ನು ಈ ಕಾವ್ಯಗಳಲ್ಲಿ ಕಾಣಬಹುದು.

ಕನ್ನಡ ಸಾಹಿತ್ಯದಲ್ಲಿಯೇ ಈ ಎರಡು ಖಂಡಕಾವ್ಯಗಳು ಯಾವತ್ತಿಗೂ ನಿತ್ಯನೂತನವಾಗಿಯೇ ಇರುವಂಥವುಗಳು. ಯೇಸುವನ್ನಾಗಲಿ, ಬುದ್ಧನನ್ನಾಗಲಿ ಜನರು ಅವತಾರ ಪುರುಷರೆಂದೂ, ದೈವಾಂಶ ಸಂಭೂತರೆಂದೂ ಪೂಜ್ಯ ಭಾವನೆಯಿಂದ ನೋಡುವುದನ್ನು ಯಾರು ಮರೆಯುವ ಹಾಗಿಲ್ಲ. ಈ ಮಹಾಪುರುಷರಿಬ್ಬರ ಮಹಾತ್ಮೆಯ ಚಿತ್ರಣ ಜನರ ಮನಸ್ಸಿನಲ್ಲಿ ಹೇಗೆ ಮೂಡಿದೆಯೋ ಅದಕ್ಕೆ ಒಂದಿನಿತೂ ಲೋಪಬಾರದಂತೆ ಕವಿ ಈ ಕಾವ್ಯಗಳಲ್ಲಿ ಚಿತ್ರಿಸುತ್ತಾರೆ. ಈ ಎರಡು ಕಾವ್ಯಗಳಲ್ಲಿ ಇಂದಿನ ಮನೋಧರ್ಮಕ್ಕೆ ಗೊಲ್ಗೊಥಾವೇ ಹೆಚ್ಚು ಪ್ರಿಯವೆನಿಸುತ್ತದೆ. ಇದಕ್ಕೆ ಕಾವ್ಯದ ವಸ್ತುವೇ ಕಾರಣವೆನ್ನಬಹುದು. ಯೇಸುವಿನ ಮರಣ ಒಂದು ದುರಂತದ ಕಥೆ. ಕಾವ್ಯದ ಒಟ್ಟು ವಾತಾವರಣವೇ ಅತ್ಯಂತ ಮನ ಕಲಕುವಂಥದ್ದು. ಬುದ್ಧದೇವನಿಗಾದರೆ ಎಂಭತ್ತು ವರ್ಷಗಳು ತುಂಬಿರುತ್ತದೆ, ಆತನಿಗೆ ಸಾವು ಸಹಜ ಧರ್ಮವಾಗಿ ಕಂಡುಬರುತ್ತದೆ. ಸ್ವತಃ ಬುದ್ಧನೇ ಅದಕ್ಕೆ ತಯಾರಾಗಿರುತ್ತಾನೆ. ಕವಿಯು ಈ ಎರಡು ಕೃತಿಗಳನ್ನು ಮಹಾತ್ಮರಿಬ್ಬರ ಮರಣದ ಕುರಿತು ಬರೆದಿರುವುದು ಸ್ಪಷ್ಟವಾಗುತ್ತದೆ. ಮಹಾತ್ಮರಿಬ್ಬರ ಅಂತ್ಯದ ಘಟನೆಯನ್ನು ಕವಿ ಪ್ರಚಾರದ ಉದ್ದೇಶದಿಂದ ಬರೆದಿಲ್ಲ. ಅವರಿಬ್ಬರ ಬದುಕಿನಲ್ಲಿ, ಬೋಧನೆಯಲ್ಲಿ, ಸಾವಿನಲ್ಲಿ ಕಂಡುಬರುವ ಸಾರ್ವತ್ರಿಕವಾದ ಗುಣವನ್ನು ಅರಿತು ಅದನ್ನು ಜಗತ್ತಿಗೆ ಸಾರುವುದಾಗಿದೆ. ಈ ಕಾವ್ಯಗಳಲ್ಲಿ ಆಯಾ ಮತಕ್ಕೆ, ಧರ್ಮಕ್ಕೆ ಸಂಬಂಧಿಸಿದ ಉಪದೇಶಗಳಿದ್ದರೂ ಅದು ಆ ಮಹಾತ್ಮನ ಪಾತ್ರ ನಿರೂಪಣೆಗೆ ಪೋಷಕವಾಗಿ ಬಂದು ರಸಸ್ವಾದನೆಗೂ ಪೂರಕವಾಗಿವೆ.

ಯೇಸು ಕ್ರಿಸ್ತನ ಮರಣದ ಕಥೆಯ ಕುರಿತು ಇಷ್ಟು ವಿಸ್ತಾರವಾದ ಖಂಡಕಾವ್ಯ ಕನ್ನಡ ಸಾಹಿತ್ಯದಲ್ಲಿ ಬಂದಿರುವುದು ಇದೇ ಮೊದಲು, ಇದೇ ಕೊನೆ. ಇಂಥ ವಸ್ತುವನ್ನು, ಪರಿಸರವನ್ನು, ಪ್ರಭಾವವನ್ನು ಹೊಂದಿರುವ ಕಾವ್ಯ ಬೇರೊಂದು ಕನ್ನಡ ಕಾವ್ಯದಲ್ಲಿಯೇ ಇಲ್ಲ. ಈ ಖಂಡಕಾವ್ಯದ ವಸ್ತುವನ್ನು ಅವರು ಬೈಬಲಿನ ಹೊಸ ಒಡಂಬಡಿಕೆ ಹಾಗೂ ಕ್ರೈಸ್ತ ಮಿಷನರಿಗಳ ಸುವಾರ್ತೆಗಳಿಂದ ಆರಿಸಿಕೊಂಡಿದ್ದರೂ, ಯೇಸುವನ್ನು ಶಿಲುಬೆಗೇರಿಸಿದ ಅವನ ಬಾಳಿನ ಕೊನೆಯ ದಿನದ ಘಟನೆಯನ್ನು ತಮ್ಮ ಕಲ್ಪನೆಯ ವರ್ಣನೆಯಿಂದಲೇ ಆ ಪರಮ ಪೂಜ್ಯನ ಸ್ಮರಣೆಯನ್ನು ಓದುಗರ ಮುಂದಿಡುತ್ತಾರೆ. ಚರಿತ್ರೆಯ ಈ ಘಟನೆಯು ಇಂದು ನಮ್ಮೆಲ್ಲರ ಕಣ್ಣೆದುರು ಕಾಣುವಂತೆ, ಓದುಗನ ಅಂತರಂಗವನ್ನು ಮುಟ್ಟುವಂತೆ ಕಾವ್ಯದಲ್ಲಿ ನಿರ್ಮಿತವಾಗಿವೆ. ಇದು ಬೈಬಲ್ಲಿನ ಕಥೆಯನ್ನು ಮಾತ್ರ ಹೇಳುತ್ತಿಲ್ಲ, ಎಲ್ಲಾ ಧರ್ಮಗಳ ಸಾರವನ್ನೇ ಬಿತ್ತರಿಸುತ್ತಿದೆ. ಜಗತ್ತಿಗೆ ಸತ್ಯವನ್ನು ಬೋಧಿಸಲು ಬಂದ ಅವತಾರ ಪುರುಷನ ನಿಷ್ಕಳಂಕ ಚರಿತ್ರೆಯನ್ನು ಮಹಾತ್ಮರ ಹೃದಯ ವೈಶಾಲ್ಯತೆಗೆ ತಕ್ಕಂತೆ ಚಿತ್ರಿಸಿರುವ ಗೋವಿಂದ ಪೈಗಳ ಹೃದಯವಂತಿಕೆ ಕಲಾ ನೈಪುಣ್ಯ ಎಲ್ಲರನ್ನೂ ಬೆರಗುಗೊಳಿಸುವಂತದ್ದು.

ಬುದ್ಧನ ಕೊನೆಯ ದಿನದ ಕುರಿತು ಬರೆದ ಕಾವ್ಯ ವೈಶಾಖಿ ಖಂಡಕಾವ್ಯ. ಬುದ್ಧನು ಹುಟ್ಟಿದ್ದು, ಬೋಧಿಯನ್ನು ಪಡೆದದ್ದು ಮತ್ತೆ ಪರಿನಿರ್ವಾಣವನ್ನು ಹೊಂದಿದ್ದು ಈ ಮೂರು ಮಹತ್ವದ ಘಟನೆಗಳು ನಡೆದದ್ದು ವೈಶಾಖ ಪೂರ್ಣಿಮೆಯಂದು. ಆದ್ದರಿಂದ ಬೌದ್ಧರಿಗೆ ಇದು ಅತ್ಯಂತ ಮಹತ್ವವೂ, ಪವಿತ್ರವೂ ಆದ ದಿನ. ಗೊಲ್ಗೊಥಾದಲ್ಲಿ ಜಗತ್ತಿನ ಮಹಾಪುರುಷನೊಬ್ಬನ ಅಕಾಲ ಮರಣ ಹಾಗೂ ಹಿಂಸೆಯ ದುರಂತ ಚಿತ್ರಣವಾದರೆ, ವೈಶಾಖಿ ವಿಶ್ವಪ್ರಖ್ಯಾತ ಧಾರ್ಮಿಕ ಪುರುಷನ ದೀರ್ಘಾಯುಸ್ಸಿನ ಪ್ರಶಾಂತವಾದ ಮರಣದ ಕಥೆಯನ್ನೊಳಗೊಂಡಿದೆ. ಎರಡೂ ಮಹಾಪುರುಷರ ಬಾಳಿನ ಕೊನೆಯನ್ನು ಚಿತ್ರಿಸುವ ಕಾವ್ಯಗಳೇ ಎನ್ನುವುದನ್ನು ಬಿಟ್ಟರೆ ಅಂತಃಸತ್ವದಲ್ಲಿ ಎರಡೂ ಕಾವ್ಯಗಳು ಭಿನ್ನ ಭಿನ್ನ ಪ್ರತಿಕ್ರಿಯೆಯನ್ನು ಕೊಡುತ್ತವೆ.

ಗೋವಿಂದ ಪೈಯವರ ಖಂಡಕಾವ್ಯಗಳಲ್ಲಿ ಮೂರನೆಯದ್ದು ಈ 'ಪ್ರಭಾಸ ಖಂಡಕಾವ್ಯ'. ಪ್ರಭಾಸದಲ್ಲಿ ಧಾರ್ಮಿಕ ಮಹಾ ಪುರುಷನೆನಿಸಿದ ಶ್ರೀ ಕೃಷ್ಣನ ಕೊನೆಯ ದಿನವನ್ನು ವಸ್ತುವನ್ನಾಗಿ ಆಯ್ದುಕೊಂಡು ಕಾವ್ಯವನ್ನು ರಚಿಸಿದ್ದಾರೆ. ಸಾಂಬನು ಹೆತ್ತಂತಹ ಒನಕೆಯ ಮುಳ್ಳಿನಿಂದಲೇ ಅವತಾರ ಪುರುಷನೆನಿಸಿದ ಶ್ರೀಕೃಷ್ಣ ಪರಮಾತ್ಮನು ಅವಸಾನ ಹೊಂದುವ ಈ ಪೌರಾಣಿಕ ಘಟನೆಯೊಂದನ್ನು ಅತ್ಯಂತ ಉಜ್ವಲವಾಗಿ, ಮನೋಹರವಾಗಿ ಕವಿಯು ಚಿತ್ರಿಸುತ್ತಿದ್ದರೇನೋ. ಆದರೆ ಈ ಕಾವ್ಯವು ಅಪೂರ್ಣವಾಗಿದೆ. ಖಂಡಕಾವ್ಯವು ಅಪೂರ್ಣವಾದರು ಗೋವಿಂದ ಪೈಯಲ್ಲಿದ್ದಂತಹ ಪ್ರತಿಭೆ, ಪಾಂಡಿತ್ಯದ ಮಹೋನ್ನತಿಯನ್ನು ಹಾಗೂ ಕೃಷ್ಣ ಪರಮಾತ್ಮನ ಅವಸಾನದ ಕೊನೆಯ ಚಿತ್ರಣವೆರಡನ್ನೂ ತಾಳೆ ಹಾಕಿದಾಗ ಇಂತಹ ಕಾವ್ಯ ಚಿತ್ರಣವನ್ನು ಬೇರೆಯಾರು ಚಿತ್ರಿಸಲಾರರು.

ಗೋವಿಂದ ಪೈಯವರು ಯೇಸು, ಬುದ್ಧ, ಕೃಷ್ಣ ಇಂತಹ ಮಹಾನ್ ಪುರುಷರ ಮರಣವನ್ನೇ ಆಧರಿಸಿ ರಚಿಸಿದಂತಹ ಖಂಡಕಾವ್ಯಗಳಲ್ಲಿ 'ದೆಹಲಿ' ಕೊನೆಯ ಕಾವ್ಯ. ಭಾರತ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಮಹಾತ್ಮ ಗಾಂಧೀಜಿಯವರ ಕೊನೆಯ ದಿನದ ಘಟನೆಯೇ ಈ ಕಾವ್ಯದ ವಸ್ತು. ಗೊಲ್ಗೊಥಾ', ವೈಶಾಖಿ', 'ಪ್ರಭಾಸ' ಈ ಮೂರು ಖಂಡಕಾವ್ಯಗಳಲ್ಲಿ ಧಾರ್ಮಿಕ ಪುರುಷರ ಕೊನೆಯ ದಿನವನ್ನು ತೆಗೆದುಕೊಂಡರೆ ಇಲ್ಲಿ ಅವರೆಲ್ಲರಿಗಿಂತಲೂ ಭಿನ್ನವಾಗಿ ಗಾಂಧೀಜಿಯ ಕೊನೆಯ ದಿನವನ್ನು ತೆಗೆದುಕೊಂಡಿದ್ದಾರೆ. ಯೇಸು, ಬುದ್ಧ, ಕೃಷ್ಣ ಈ ಮೂವರು ಆಧ್ಯಾತ್ಮದ ಪಥದಲ್ಲಿ ಸಾಗಿ ಲೋಕೋದ್ಧಾರವೇ ತಮ್ಮ ಪರಮ ಗುರಿ ಎಂಬ ಧ್ಯೇಯವನ್ನು ಹೊಂದಿದ್ದವರಾಗಿದ್ದು ಅವರಂತೆಯೇ ಗಾಂಧೀಜಿಯೂ ಕೂಡ ಸರ್ವೋತ್ಕೃಷ್ಟ ರಾಜಕೀಯ ಹಾಗೂ ಆಧ್ಯಾತ್ಮಿಕ ನಾಯಕರಾಗಿದ್ದವರು. ಆದ್ದರಿಂದಲೇ ಅವರು ಯಾವುದೇ ಮತಸಂಸ್ಥಾಪಕರಲ್ಲದಿದ್ದರೂ, ಈ ಮೂವರು ಮಹಾಪುರುಷರ ಸಾಲಿನಲ್ಲಿ ಅವರನ್ನೂ ಒಬ್ಬರನ್ನಾಗಿ ಪರಿಗಣಿಸಿದ್ದು.

ದೇವರಲ್ಲಿ ಗೋವಿಂದ ಪೈಯವರಿಗೆ ಅಪಾರ ವಿಶ್ವಾಸ, ನಂಬಿಕೆ. ಅವರ ಆರಾಧ್ಯ ದೈವ ಕೃಷ್ಣ. ಆದರೂ ಅವರಿಗೆ ಕೃಷ್ಣ ಬೇರೆಯಲ್ಲ ಯೇಸು ಬೇರೆಯಲ್ಲ.

ದೇಶ, ಹುಟ್ಟೂರು, ಹಿರಿಯರು, ದೇವರ ಮೇಲಿನ ಅವರ ಭಕ್ತಿ ಅಪಾರವಾದುದು. ಒಳ್ಳೆಯದು ಎಲ್ಲಿದ್ದರೂ ಅದನ್ನು ಸ್ವೀಕರಿಸಬೇಕು ಎಂಬ ಮನೋಭಾವದಿಂದ ದೇಶ, ಭಾಷೆ, ಧರ್ಮಗಳ ಎಲ್ಲೆಯನ್ನೇ ಅವರು ಮೀರಿದವರು. ಇತರ ಧರ್ಮಗಳ ಮಹಾನ್ ವ್ಯಕ್ತಿಗಳ ಒಳ್ಳೆಯ ಗುಣಗಳನ್ನು ಕೊಂಡಾಡಿದ್ದಲ್ಲದೇ ಆ ಉತ್ತಮ ಗುಣಗಳನ್ನು ಸ್ವತಃ ತನ್ನ ಜೀವನದಲ್ಲಿ ಆಚರಣೆಗೆ ತಂದವರು. ಆ ಕಾಲದಲ್ಲಿದ್ದ ಏಕಕೇಂದ್ರ ಧರ್ಮವಾದ ವೈದಿಕ ಧರ್ಮವನ್ನು ಮೀರಿ ಎಲ್ಲಾ ಧರ್ಮವು ಒಂದೇ ಎಂದು ಸಾರಿದವರು. ಮಾನವತಾವಾದಿಗಳಾಗಿದ್ದ ಅವರಲ್ಲಿ ಧರ್ಮ, ಭಾಷೆಗಳ ಬಗೆಗೆ ಸಂಕುಚಿತ ಭಾವನೆಗಳಿರದೆ, ಅವರಿಗೆ ತನ್ನ ಭಾಷೆ, ಧರ್ಮಗಳಲ್ಲಿಯೂ ಅಭಿಮಾನವಿತ್ತು. “ಹಿಂದೂ ಧರ್ಮದೊಳೆನ್ನ, ಭಾರತದೊಳೆನ್ನಂ ಪುಟ್ಟಿಸೈ” ಎಂಬ ಮಾತಿನಲ್ಲಿ ಧರ್ಮ, ದೇಶಗಳ ಮೇಲೆ ಅವರಿಗಿದ್ದ ಭಕ್ತಿ ಎದ್ದು ತೋರುತ್ತದೆ. ಅದ್ವೈತ ಭಾವನೆಯಿಂದಲೇ ಎಲ್ಲೆಲ್ಲೂ ದೇವರನ್ನು ಕಾಣುವ ಅವರು ಕೃಷ್ಣನಲ್ಲಿ ಅವರಿಗೆ ವಿಶೇಷ ಭಕ್ತಿ ಇದ್ದುದರಿಂದಲೇ ಪ್ರಭಾಸ ಎಂಬ ಖಂಡಕಾವ್ಯವನ್ನು ಬರೆದರು. ಶ್ರೀ ಕೃಷ್ಣನಲ್ಲಿ ವಿಶೇಷ ಭಕ್ತಿಯಿದ್ದರೂ ಎಲ್ಲಾ ಧರ್ಮಗಳ ಒಳ್ಳೆಯದನ್ನು ಮೆಚ್ಚುವ ಧರ್ಮಸಮನ್ವಯ ಅವರ ಗುರಿ. ಹಿಂದೂ, ಇಸ್ಲಾಂ, ಕ್ರೈಸ್ತ ಧರ್ಮಗಳ ಸಮನ್ವಯಕ್ಕೆ ಹೆಚ್ಚು ಒತ್ತು ಕೊಟ್ಟವರು. ಸಾಹಿತ್ಯದಲ್ಲಿ ವೃತ್ತ ಛಂದಸ್ಸು ಪ್ರಾಸಗಳನ್ನು ತೊರೆದು ಹೊಸ ಮಾರ್ಗವನ್ನು ರೂಢಿಸಿಕೊಂಡಂತೆ, ಧರ್ಮದಲ್ಲೂ ಸುಧಾರಣೆಗಳನ್ನು ಬಯಸಿದವರು. ಹೀಗೆ ಗೋವಿಂದ ಪೈಯವರು ಜಗತ್ತಿನ ಮಹಾ ಮಾನವರಾದ ಯೇಸು, ಬುದ್ಧ, ಕೃಷ್ಣ, ಗಾಂಧಿ ಮೊದಲಾದವರ ಮಹಾಗುಣಗಳನ್ನು ಜಗತ್ತಿಗೆ ತಿಳಿಯುವ ಹಾಗೆ ಮಾಡಿದರಲ್ಲದೆ ತಮ್ಮಲ್ಲೂ ಅವನ್ನು ಅಳವಡಿಸಿಕೊಂಡು ತಾವೂ ಅವರಂತೆ ಮಹಾನುಭಾವರಾದವರು.

ಉಪಸಂಹಾರ:

ಗೊಲ್ಗೊಥಾ, ವೈಶಾಖಿ, ಪ್ರಭಾಸ ಹಾಗೂ ದೆಹಲಿ ಈ ನಾಲ್ಕು ಕಾವ್ಯಗಳ ಮಹತ್ವವಿರುವುದು ಅವು ಮಹಾಪುರುಷರ ಅಂತ್ಯದ ಬಗ್ಗೆ ಇವೆ ಎಂಬಷ್ಟರಿಂದಲೇ ಅಲ್ಲ, ಮಹಾಕಾವ್ಯಗಳ ವಿಸ್ತಾರ, ಆಳ ಇರುವಂತಹ ವ್ಯಕ್ತಿ ವಿಷಯಗಳನ್ನು ಮಿತವಾದ ಅವಕಾಶದಲ್ಲಿ ಸಮಗ್ರ ಚಿತ್ರಣ ಸಿಗುವಂತೆ ಚಿತ್ರಿಸಿರುವ ಗೋವಿಂದ ಪೈ ಅವರ ಬರಹ ಕೌಶಲದಲ್ಲಿ. ಹಾಗೂ ಒಂದೇ ಓದಿನಲ್ಲಿ ಈ ಮಹಾನ್ ವ್ಯಕ್ತಿಗಳನ್ನು ಕಣ್ಮುಂದೆ ತಂದು ನಿಲ್ಲಿಸುವಂತೆ ಮಾಡುವ ಅವರ ನಿರೂಪಣಾ ಶೈಲಿಯಲ್ಲಿ. ಎಲ್ಲಾ ಖಂಡಕಾವ್ಯಗಳು ಯೇಸು, ಬುದ್ಧ, ಕೃಷ್ಣ ಮತ್ತು ಗಾಂಧೀಜಿ ಈ ಎಲ್ಲರ ಬಗ್ಗೆ ಇರುವ ಲಭ್ಯ ಆಕರಗಳನ್ನಿಟ್ಟುಕೊಂಡು ರಚನೆಯಾಗಿರುವ ವಸ್ತುನಿಷ್ಠ ಕಾವ್ಯಗಳಾಗಿವೆ.

ಪರಾಮರ್ಶನ ಗ್ರಂಥಗಳು:

1. ಮಂಜೇಶ್ವರ ಗೋವಿಂದ ಪೈ, (1988), ಗೊಲ್ಗೊಥಾ ಮತ್ತು ವೈಶಾಖಿ, ಮೈಸೂರು: ಕಾವ್ಯಾಲಯ ಪ್ರಕಾಶನ.
2. ಕಯ್ಯಾರ ಕಿಞ್ಞಣ್ಣ ರೈ, (1983), ಗೋವಿಂದ ಪೈ ಸ್ಮೃತಿ–ಕೃತಿ, ಮಂಜೇಶ್ವರ: ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಮಿತಿ.
3. ರಾ.ಗೌ., (1991), ಸಮಾಕೀರ್ಣ, ಬೆಂಗಳೂರು: ಚಿತ್ರಾಕೂಟ ಪ್ರಕಾಶನ.
4. ರಾಮದೇವ ಶಣೈ ಆರ್., (1990), ದೀವಿಗೆ, ಕುಂದಾಪುರ: ಎಂ. ಗೋವಿಂದ ಪೈ ಸ್ಮಾರಕ ನಿಧಿ ಪ್ರಕಾಶನ.
5. ವೆಂಕಟಸುಬ್ಬಯ್ಯ ಜಿ., (2007), ಗತಿಪ್ರಜ್ಞೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ಶಂಕರ ಮೊಕಾಶಿ ಪುಣೇಕರ, (1995), ಅಪೂರ್ಣ ವರ್ತಮಾನ ಕಾಲ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.